MVC No. 282/2021 PW-1

<u>ದಿನಾಂಕ **01.08.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಎದುರುದಾರರ ಪರ ಶ್ರೀ ಕೆ ಟಿ ಟಿ ವಕೀಲರಿಂದ ಃ</u>

ನಾನು ಚನ್ನಪಟ್ಟಣದಲ್ಲಿ ವಾಸವಿಲ್ಲ. ಟಿ ಬಿ ಸರ್ಕಲ್ ಮದ್ದೂರಿನಲ್ಲಿ ಮಳವಳ್ಳಿಗೆ ಹೋಗುವ ರಸ್ತೆ, ಟೌನ್ ಒಳಗೆ ಹೋಗುವ ರಸ್ತೆ ಸೇರುತ್ತವೆ ಎಂದರೆ ನಿಜ. ಸದರಿ ಸ್ಥಳದಲ್ಲಿ ಸಿಗ್ನಲ್ ಇದೆ ಎಂದರೆ ಸುಳ್ಳು. ಅಲ್ಲಿ 4 ರಸ್ತೆಗಳು ಸೇರುವುದರಿಂದ ಪೋಲಿಸರು ಇರುತ್ತಾರೆಂದರೆ ನಿಜ. ಈ ವೃತ್ತದಲ್ಲಿ ಮೈಸೂರು ಕಡೆಯಿಂದ ಬಂದವರು ಮಳವಳ್ಳಿಗೆ ಹೋಗಲು ಬಲಗಡೆಗೆ ಎಂದರೆ ನಿಜ. ಸದರಿ ವೃತ್ತದಲ್ಲಿ ವಾಹನ ದಟ್ಟಣೆ ಇರುತ್ತವೆ ಎಂದರೆ ನಿಜ. ಈ ವೃತ್ತದಲ್ಲಿ ಮೈಸೂರು ಕಡೆಯಿಂದ ಮದ್ದೂರು ಕಡೆ ತಿರುಗುವ ವಾಹನಗಳು ನಿಧಾನವಾಗಿ ಚಲಿಸಬೇಕಾಗುತ್ತದೆ ಎಂದರೆ ನಿಜ. ನಾನು ಕೆಲಸಕ್ಕೆ ಹೋಗುವ ಜರೂರಿನಲ್ಲಿ ಬೆಂಗಳೂರಿನ ಕಡೆಯಿಂದ ಬರುವ ವಾಹನಗಳನ್ನು ಲೆಕ್ಕಿಸದೇ ಜೋರಾಗಿ ತಿರುವು ಪಡೆದಿರುತ್ತೇನೆಂದರೆ ಸುಳ್ಳು. ನಾನು ರಸ್ತೆಯನ್ನು ದಾಟುವ ಭರದಲ್ಲಿ ನಾನೇ ಕೆ ಎಸ್ ಆರ್ ಟಿ ಸಿ ಬಸ್ಸಿಗೆ ಡಿಕ್ಕಿ ಪಡಿಸಿರುತ್ತದೆ ಎಂದರೆ ಸುಳ್ಳು. ಆ ಸಮಯದಲ್ಲಿ ಕೆ ಎಸ್ ಆರ್ ಟಿ ಸಿ ಬಸ್ಸು ನಿಲ್ಲಿಸುತ್ತಿತ್ತು ಎಂದರೆ ಸುಳ್ಳು. ನನ್ನ ಅಜಾಗರುಕತೆಯಿಂದ ಅಪಘಾತವಾಗಿದೆ ಎಂದರೆ ಸುಳ್ಳು. ನಾನು ಅತೀ ವೇಗವಾಗ ಬಂದು ರಸ್ತೆ ದಾಟಲು ಹೋಗಿ ಈ ಅಪಘಾತಪಡಿಸಿಕೊಂಡಿರುತ್ತೇನೆಂದರೆ ಸುಳ್ಳು. ನನ್ನ ತಪ್ಪಿನಿಂದ ಆದ ಅಪಘಾತಕ್ಕೆ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸುಳ್ಳು.

2. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಎಲ್ಲಿ ಕೆಲಸ ಮಾಡುತ್ತಿದ್ದೆ ಮತ್ತು ಯಾರ ಬಳಿ ಕೆಲಸ ಮಾಡುತ್ತಿದ್ದೆ ಮತ್ತು ಸಂಬಳದ ಬಗ್ಗೆ ನಮೂದು ಮಾಡಿರುತ್ತೇನೆ. ನಾನು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ನನಗೆ ಯಾವುದೇ ಗಾಯಗಳು ಆಗಿಲ್ಲ ಎಂದರೆ ಸುಳ್ಳು. ಆಸ್ಪತ್ರೆಗೆ ನಾನು ಹೇಳಿರುವಷ್ಟು ಹಣ

ಖರ್ಚು ಮಾಡಿಲ್ಲ ಎಂದರೆ ಸುಳ್ಳು. ಪರಿಹಾರ ಪಡೆಯುವ ಸಲುವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ನಿಪಿ-4 ರ ನಕ್ಷೆಯಲ್ಲಿ ಅಪಘಾತವಾದ ಸ್ಥಳ ರಸ್ತೆಯಲ್ಲಿ ತೋರಿಸಿದ್ದಾರೆಂದರೆ ಸುಳ್ಳು. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

**(ವೆಂಕಟೇಶಪ್ಪ. ವಿ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.